# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ
(ವಿಧಾನ ಸಭೆಯಿಂದ ಚುನಾಯಿತರಾದವರು )

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 922

ಉತ್ತರಿಸಬೇಕಾದ ದಿನಾಂಕ : 17-12-2024

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಆಯವ್ಯಯ ಮಂಡನೆ ಸಂದರ್ಭದಲ್ಲಿ ಶೂನ್ಯ ಬಡ್ಡಿ ದರದಲ್ಲಿ ವಿತರಿಸುವ ಬೆಳೆ ಸಾಲದ ಮಿತಿಯನ್ನು 3 ಲಕ್ಷದಿಂದ 5 ಲಕ್ಷಕ್ಕೆ ಏರಿಸಲಾಗಿದೆ; ಈ ಬಗ್ಗೆ ಇನ್ನೂ ಸಹ ಸಂಬಂಧಪಟ್ಟ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಹೆಚ್ಚುವರಿ ಮಾಡಿರುವ ರೂ.5.00 ಲಕ್ಷಗಳನ್ನು ನೀಡದೆ ಇರುವುದರಿಂದ ಈ ಬಗ್ಗೆ ಸರ್ಕಾರ ಇದುವರೆಗೆ ಏನೂ ಕ್ರಮ ಕೈಗೊಂಡಿದೆ; | ಸರ್ಕಾರದ ಆದೇಶ ಸಂಖ್ಯೆ: ಸಿಒ 167 ಸಿಎಲ್ಎಸ್ 2023 ದಿನಾಂಕ : 08.09.2023 ರ ಆದೇಶದಲ್ಲಿ ಶೂನ್ಯ ಬಡ್ಡಿದರದಲ್ಲಿ ವಿತರಿಸುವ ಬೆಳೆ ಸಾಲದ ಮಿತಿಯನ್ನು ರೂ.3.00 ಲಕ್ಷದಿಂದ ರೂ.5.00 ಲಕ್ಷದವರೆಗೆ ಹೆಚ್ಚಿಸಲಾಗಿದೆ.<br><br>ಬೆಳೆ ಸಾಲವನ್ನು ರೈತರ ಭೂ ಹಿಡುವಳಿ ಮತ್ತು ಸ್ಕೇಲ್ ಆಫ್ ಫೈನಾನ್ಸ್ ಆಧಾರವಾಗಿ ಮಂಜೂರು ಮಾಡಬೇಕಿದ್ದು, ಕ್ರಮಿಕ ಪತ್ತಿನ ಮಿತಿಯನ್ವಯ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಸ್ವಂತ ಬಂಡವಾಳ, ನಬಾರ್ಡ್ ಪುನರ್ಧನ ಮಿತಿ ಮತ್ತು ಈ ಹಿಂದೆ ರೈತರು ಪಡೆದ ಸಾಲದ ಮಿತಿಯನ್ನು ಆಧರಿಸಿ ಬೆಳೆಸಾಲ ವಿತರಿಸಲಾಗುತ್ತದೆ.<br><br>ರಾಜ್ಯದಲ್ಲಿ ಈ ವರ್ಷದ ನವೆಂಬರ್ ಅಂತ್ಯದವರೆಗೆ ಪ್ಯಾಕ್ಸ್‌ಗಳ ಮೂಲಕ 11,934 ರೈತರಿಗೆ ರೂ.535.83 ಕೋಟಿ ಬೆಳೆ ಸಾಲ ವಿತರಿಸಲಾಗಿದೆ.<br><br>ಬಂಡವಾಳದ ಕೊರತೆಯಿಂದಾಗಿ ರೂ.3.00 ಲಕ್ಷಗಳವರೆಗಿನ ಸಾಲಗಳಿಗೆ ಮೊದಲ ಆದ್ಯತೆ ನೀಡುತ್ತಿದ್ದು, ಈ ಸದಸ್ಯರ ಬೇಡಿಕೆ ಪೂರ್ಣಗೊಂಡ ನಂತರ ರೈತರ ರೂ. 3.00 ಲಕ್ಷಕ್ಕಿಂತ ಹೆಚ್ಚಿಗೆ ರೂ. 5.00 ಲಕ್ಷಗಳವರೆಗಿನ ಸಾಲದ ಬೇಡಿಕೆಯನ್ನು ಪೂರ್ಣ ಪ್ರಮಾಣದಲ್ಲಿ ವಿತರಿಸಲು ಕ್ರಮವಹಿಸಲಾಗುವುದು. |

| | | |
|---|---|---|
| ಆ) | ಕೃಷಿ ಅಭಿವೃದ್ಧಿಗಾಗಿ ಶೇಕಡಾ 3% ರ ಬಡ್ಡಿ ದರದಲ್ಲಿ ನೀಡುತ್ತಿರುವ ಸಾಲದ ಮಿತಿಯನ್ನು 10 ಲಕ್ಷದಿಂದ 15 ಲಕ್ಷಕ್ಕೆ ಏರಿಕೆ ಮಾಡಲಾಗಿದೆ; ಆದರೆ ಯಾವುದೇ ಪ್ರಾಥಮಿಕ ಸಹಕಾರ ಸಂಘಗಳು 10 ಲಕ್ಷಕ್ಕಿಂತ ಜಾಸ್ತಿ ವಿತರಣೆ ಮಾಡದೆ ಈ ಬಗ್ಗೆ ಸರ್ಕಾರ ಏನೂ ಕ್ರಮ ಕೈಗೊಂಡಿದೆ; | ಸರ್ಕಾರದ ಆದೇಶ ಸಂಖ್ಯೆ: ಸಿಒ 167(1) ಸಿಎಲ್‌ಎಸ್ 2023 ದಿನಾಂಕ : 08.09.2023 ರ ಆದೇಶದಲ್ಲಿ ಶೇ.3 ರ ಬಡ್ಡಿದರದಲ್ಲಿ ವಿತರಿಸುವ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲದ ಮಿತಿಯನ್ನು ರೂ.10.00 ಲಕ್ಷದಿಂದ ರೂ.15.00 ಲಕ್ಷದವರೆಗೆ ಹೆಚ್ಚಿಸಲಾಗಿದೆ.<br><br>ನಬಾರ್ಡ್, ಪ್ರತಿ ಯೋಜನೆಗೆ ನಿಗದಿಪಡಿಸಿದ ಯುನಿಟ್ ಕಾಸ್ಟ್ ಮತ್ತು ಯೋಜನಾ ವೆಚ್ಚವನ್ನು ಆಧರಿಸಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಸ್ವಂತ ಬಂಡವಾಳ, ನಬಾರ್ಡ್ ಪುನರ್ಧನ ಮಿತಿ ಆಧರಿಸಿ ಬೆಳೆಸಾಲ ವಿತರಿಸಲಾಗುತ್ತದೆ. |
| ಇ) | ಯಾವ ಕಾಲಮಿತಿಯೊಳಗೆ ಹೆಚ್ಚುವರಿ ಮಾಡಿದ ಹಣವನ್ನು ಇದುವರೆಗೆ ವಿತರಣೆ ಆಗದ ಸಾಲದ ಹಣವನ್ನು ಅರ್ಹ ಫಲಾನುಭವಿಗಳಿಗೆ ಸಿಗುವಂತೆ ಸೂಕ್ತ ಕ್ರಮ ವಹಿಸಲಾಗುವುದು? | ದಿನಾಂಕ:01-04-2024 ರಿಂದ ದಿ: 31-10-2024 ರವರೆಗೆ ಶೇಕಡಾ 3 ರ ಬಡ್ಡಿ ದರದಲ್ಲಿ ರೂ.10.00 ಲಕ್ಷಗಳಿಗಿಂತ ಹೆಚ್ಚಿಗೆ ಒಟ್ಟು 372 ರೈತರಿಗೆ ಒಟ್ಟು ರೂ.6185.49 ಲಕ್ಷ ಸಾಲ ವಿತರಿಸಲಾಗಿದೆ.<br><br>ಬಂಡವಾಳದ ಕೊರತೆಯಿಂದಾಗಿ ರೂ.10.00 ಲಕ್ಷಗಳವರೆಗಿನ ಸಾಲಗಳಿಗೆ ಮೊದಲ ಆದ್ಯತೆ ನೀಡುತ್ತಿದ್ದು, ಈ ಸದಸ್ಯರ ಬೇಡಿಕೆ ಪೂರ್ಣಗೊಂಡ ನಂತರ ರೈತರ ರೂ.10.00 ಲಕ್ಷಕ್ಕಿಂತ ಹೆಚ್ಚಿಗೆ ರೂ.15.00 ಲಕ್ಷಗಳವರೆಗಿನ ಸಾಲದ ಬೇಡಿಕೆಯನ್ನು ಪೂರ್ಣ ಪ್ರಮಾಣದಲ್ಲಿ ವಿತರಿಸಲು ಕ್ರಮವಹಿಸಲಾಗುವುದು. |

**ಸಂಖ್ಯೆ: ಸಿಒ 300 ಸಿಎಲ್‌ಎಸ್ 2024**

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು**